ಕರ್ನಾಟಕ ಸರ್ಕಾರ
ಆಯುಷ್ ಇಲಾಖೆ
ಧನ್ವಂತರಿ ರಸ್ತೆ, ಬೆಂಗಳೂರು – 560 009, ದೂರವಾಣಿ ಸಂ: 080 – 22876553, ಫ್ಯಾಕ್ಸ್: 080 - 223340139
ಇ –ಮೇಲ್ : karnatakanam@gmail.com

---

ಸಂಖ್ಯೆ: AYUSH/225/NAM/2025-NAM-DIRECTORATE OF AYUSH ದಿನಾಂಕ: 04-11-2025
Comp:1936352

## -:ಸುತ್ತೋಲೆ:-

ವಿಷಯ : ಆಯುಷ್ ಪದ್ಧತಿಗಳ ಕಿರು ಪುಸ್ತಕಗಳನು ಪ್ರಕಟಿಸುವ ಬಗ್ಗೆ.
ಉಲ್ಲೇಖ : ರಾಷ್ಟ್ರೀಯ ಆಯುಷ್ ಅಭಿಯಾನದಡಿ ಮುದ್ರಿಸಲಾಗುತ್ತಿರುವ ಪುಸ್ತಕಗಳ Content ಗಳನ್ನು ಅಂತಿಮಗೊಳಿಸಲು ದಿನಾಂಕ: 14-10-2025 ರಂದು ನಡೆದ ಸಭೆಯಲ್ಲಿ ನಿರ್ಧರಿಸಿದಂತೆ.

******

ಆಯುಷ್ ಪದ್ಧತಿಗಳಲ್ಲಿ ಅಡಕವಾಗಿರುವ ಆರೋಗ್ಯ ರಕ್ಷಕ ಸಿದ್ಧಾಂತಗಳನ್ನು ಸಾರ್ವಜನಿಕರಿಗೆ ತಿಳಿಸಲು IEC ಕಾರ್ಯಕ್ರಮದ ಅಂಗವಾಗಿ ಆಯುಷ್ ಪದ್ಧತಿಗಳ ಕಿರು ಪುಸ್ತಕಗಳನ್ನು ಪ್ರಕಟಿಸಲು ಉಲ್ಲೇಖಿತ ಸಭೆಯಲ್ಲಿ ನಿರ್ಧರಿಸಿದ್ದು ಈ ಕಿರು ಪುಸ್ತಕಗಳಿಗೆ ಅವಶ್ಯಕವಿರುವ ಲೇಖನಗಳನ್ನು ತಮ್ಮ ವ್ಯಾಪ್ತಿಯ ವೈದ್ಯಾಧಿಕಾರಿಗಳು/ತಜ್ಞ ವೈದ್ಯರು/ ಉಪನ್ಯಾಸಕರು/ ಪ್ರಾಧ್ಯಾಪಕರು ವಿದ್ಯಾರ್ಥಿಗಳು ಹಾಗೂ ಇತರೆ ಆಸಕ್ತರಿಂದ ಕ್ರೋಢೀಕರಿಸಿ ದಿನಾಂಕ: 20-11-2025 ರೊಳಗೆ ಆಯುಷ್ ನಿರ್ದೇಶನಾಲಯದ ರಾಷ್ಟ್ರೀಯ ಆಯುಷ್ ಅಭಿಯಾನ ವಿಭಾಗಕ್ಕೆ ಸಲ್ಲಿಸಲು ತಿಳಿಸಿದೆ.

ನಿಬಂಧನೆಗಳು:

- ಲೇಖನಗಳು ಜನಸಾಮಾನ್ಯರಿಗೆ ಅರ್ಥವಾಗುವಂತೆ ಸರಳ ಕನ್ನಡ ಭಾಷೆಯಲ್ಲಿರಬೇಕು.
- ಲೇಖನವು ಸರಳ, ಸುರಕ್ಷಿತ ಮಾಹಿತಿಯನ್ನು ಒಳಗೊಂಡಿರಬೇಕು.
- ಆಯುಷ್ ಪದ್ಧತಿಗಳ ಸಂಹಿತೆಗಳು, ಅಧಿಕೃತ ಪುಸ್ತಕಗಳಲ್ಲಿರುವ ಮಾಹಿತಿಯನ್ನು ಲೇಖನ ರೂಪದಲ್ಲಿ ಸರಳವಾಗಿ ಬರೆದರೆ ಸೂಕ್ತ.
- ಆರೋಗ್ಯ ಸಂರಕ್ಷಕ, ರೋಗನಿರೋಧಕ ಶಕ್ತಿ ಹೆಚ್ಚಿಸುವ, ಆರೋಗ್ಯಕರ ಜೀವನಶೈಲಿ, ಆಹಾರ ಕ್ರಮವನ್ನು ತಿಳಿಸುವ ಹಾಗೂ ಅಸಾಂಕ್ರಾಮಿಕ ರೋಗಗಳನ್ನು ನಿಯಂತ್ರಿಸುವ ಇತ್ಯಾದಿ ಸಾರ್ವಜನಿಕರಿಗೆ ಅವಶ್ಯಕ ಇರುವ ವಿಷಯಗಳ ಬಗ್ಗೆ ಲೇಖನ ಬರೆಯುವುದು ಸೂಕ್ತ .
- ಲೇಖಕರು ತಮ್ಮ ಹೆಸರು, ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ, ಮೊಬೈಲ್ ಸಂಖ್ಯೆ ಹಾಗೂ ಇಮೇಲ್ ವಿಳಾಸ ನಮೂದಿಸಿ.
- ಸಂಗ್ರಹಿತ ಲೇಖನಗಳನ್ನು ಸಂಪಾದಕ ಮಂಡಳಿಗೆ ಸಲ್ಲಿಸಲಾಗುವುದು ಆಯ್ಕೆಯಾದ ಲೇಖನಗಳನ್ನು ಮಾತ್ರ ಪುಸ್ತಕ ರೂಪದಲ್ಲಿ ಪ್ರಕಟಿಸಲಾಗುವುದು.
- ಲೇಖನಗಳ soft copy A4page alignment, font size 12, line spacing 2, ಹಾಗೂ font nudi Nirmal UI ನಲ್ಲಿ ಕನ್ನಡದಲ್ಲಿ 4 ಪುಟಗಳಿಗೆ ಮೀರದಂತಿರಲಿ.
- Soft copy ಯನ್ನು e-mail ಮೂಲಕ, A4 size page ನಲ್ಲಿ ಮುದ್ರಿತ hard copy ಯನ್ನು ಅಂಚೆಯ ಮುಖಾಂತರ ನಿಗದಿತ ದಿನಾಂಕದೊಳಗೆ NAM ವಿಭಾಗಕ್ಕೆ ಕಳಿಸಿಕೊಡುವುದು ಕಡ್ಡಾಯ.

Email: karnatakanam@gmail.com

ಯೋಜನಾ ನಿರ್ದೇಶಕರು
ರಾಷ್ಟ್ರೀಯ ಆಯುಷ್ ಅಭಿಯಾನ
ಆಯುಷ್ ನಿರ್ದೇಶನಾಲಯ
ಧನ್ವಂತರಿ ರಸ್ತೆ, ಬೆಂಗಳೂರು-09

ಗೆ,

1. ಪ್ರಾಚಾರ್ಯರು, ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ,

ಬೆಂಗಳೂರು/ಮೈಸೂರು/ಶಿವಮೊಗ್ಗ/ಬಳ್ಳಾರಿ.

2. ಪ್ರಾಚಾರ್ಯರು, ಸರ್ಕಾರಿ ಯುನಾನಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಬೆಂಗಳೂರು.
3. ಪ್ರಾಚಾರ್ಯರು, ಸರ್ಕಾರಿ ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಬೆಂಗಳೂರು.
4. ಪ್ರಾಚಾರ್ಯರು, ಸರ್ಕಾರಿ ಯೋಗ ಮತ್ತು ಪ್ರಕೃತಿ ಚಿಕಿತ್ಸೆ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಬೆಂಗಳೂರು.
5. ಉಪ ನಿರ್ದೇಶಕರು, ಸರ್ಕಾರಿ ಕೇಂದ್ರೀಯ ಔಷಧಾಗಾರ, ಜಯನಗರ, ಬೆಂಗಳೂರು
6. ಉಪ ನಿರ್ದೇಶಕರು, ಆಯುಷ್ ತರಬೇತಿ ಕೇಂದ್ರ, ಸುಗ್ಗನಹಳ್ಳಿ, ರಾಮನಗರ, ಬೆಂಗಳೂರು ದಕ್ಷಿಣ ಜಿಲ್ಲೆ
7. ಸಹಾಯಕ ನಿರ್ದೇಶಕರು, ಆಯುರ್ವೇದ ಸಂಶೋಧನ ಕೇಂದ್ರ, ಮೈಸೂರು
8. ಜಿಲ್ಲಾ ಆಯುಷ್ ಅಧಿಕಾರಿಗಳು,ಜಿಲ್ಲಾ ಆಯುಷ್ ಕಛೇರಿ,...................................... ಜಿಲ್ಲೆ.
9. ಸ್ಥಾನಿಕ ವೈದ್ಯಾಧಿಕಾರಿಗಳು, 50 ಹಾಸಿಗೆಗಳ ಆಯುಷ್‌ಸಂಯುಕ್ತ ಆಸ್ಪತ್ರೆ, ಗದಗ ಜಿಲ್ಲೆ.
10. ವೈದ್ಯಕೀಯ ಅಧೀಕ್ಷಕರು, 50 ಹಾಸಿಗೆಗಳ ಆಯುಷ್‌ಸಂಯುಕ್ತ ಆಸ್ಪತ್ರೆ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ.
11. ವೈದ್ಯಕೀಯ ಅಧೀಕ್ಷಕರು, 50 ಹಾಸಿಗೆಗಳ ಯುನಾನಿ ಆಸ್ಪತ್ರೆ, ಕಲಬುರಗಿ, ಕಲಬುರಗಿ ಜಿಲ್ಲೆ.

**ಪ್ರತಿಯನ್ನು:**

1. ಉಪ ನಿರ್ದೇಶಕರು, ಆಯುರ್ವೇದ/ಯುನಾನಿ/ಹೋಮಿಯೋಪತಿ/ಯೋಗ ಮತ್ತು ಪ್ರ.ಚಿ. ಆಯುಷ್ ನಿರ್ದೇಶನಾಲಯ, ಬೆಂಗಳೂರು.
2. ಕ.ಪ್ರ/ಹೆ.ಪ್ರ.